# ಯಲಹಂಕದ ನಾಡಪ್ರಭುಗಳು

**ಸ್ಥಾಪನೆ-1418, ಆಳ್ವಿಕೆ ಕಾಲ 310 ವರ್ಷಗಳು.**

# ಪೀಠಿಕೆ - INTRODUCTION

- ಆವತಿಯ ಪಾಳೆಯಗಾರ ರಣಭೈರೇಗೌಡನ ಕಿರಿಯ ಮಗ ಜಯಗೌಡ ಅಥವಾ ಜಯದೇವಗೌಡನೆಂಬುವನಿಂದ ಬೆಂಗಳೂರು ಜಿಲ್ಲೆಯಲ್ಲಿರುವ ಯಲಹಂಕದಲ್ಲಿ ಸ್ಥಾಪಿಸಿದ ಪಾಳೆಯಗಾರರ ಮನೆತನ.
- ಯಲಹಂಕ ನಾಡಪ್ರಭುಗಳೆಂಬ ಬಿರುದನ್ನು ವಿಜಯನಗರದ ಅರಸರಿಂದ ಪಡೆದಿದ್ದರು.
- ಬೆಂಗಳೂರು ಜಿಲ್ಲೆಯ ಬಹುಭಾಗವನ್ನು ಆಳುತ್ತಿದ್ದ ಇವರು ಮೊದಲಿಗೆ ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿದ್ದು 1638ರ ಸುಮಾರಿನಲ್ಲಿ ಸ್ವತಂತ್ರರಾದರು.
- 1728ರಲ್ಲಿ ಅಂತಿಮವಾಗಿ ಮೈಸೂರು ರಾಜ್ಯದಲ್ಲಿ ಈ ಪ್ರಾಂತ್ಯ ವಿಲೀನಗೊಂಡಿತು.

# ಕೆಂಪೇಗೌಡ ಹೆಸರಿನ ಮಹತ್ವ

- ಜಯಗೌಡ ತಂದೆಯ ಆದೇಶದಂತೆ ಆವತಿಯಿಂದ ಯಲಹಂಕಕ್ಕೆ ಬಂದು 1420ರಲ್ಲಿ ಪಾಳೆಯ ಪಟ್ಟನ್ನು ಸ್ಥಾಪಿಸಿ ವಿಜಯನಗರದ ಸಾಮಂತನಾಗಿ ಯಲಹಂಕನಾಡ ಪ್ರಭುವೆಂಬ ಅಂಕಿತದಿಂದ 1450 ವರೆಗೆ ಆಳಿದ.
- ಅನಂತರ ಮಗ ಗಿಡ್ಡೇಗೌಡ ಕುಲದೈವ ಕೆಂಪಮ್ಮನ ಅನುಗ್ರಹದಿಂದ ಪಡೆದ ಮಗನಿಗೆ ಕೆಂಪನಂಜೇಗೌಡ ಎಂದು ಹೆಸರಿಟ್ಟಿದ್ದರಿಂದ ಮುಂದಿನ ವಂಶಜರೆಲ್ಲ ಕೆಂಪಮ್ಮನ ಹೆಸರು ಧರಿಸುವ ವಾಡಿಕೆಬಂತು.

# ಕೆಂಪನಂಜೇಗೌಡ - 1480—1510

- ಅನಂತರ ಈ ವಂಶದ ಪ್ರಸಿದ್ಧನಾದ ಬೆಂಗಳೂರಿನ ನಿರ್ಮಾಪಕ ಮೊದಲ ಕೆಂಪೇಗೌಡ (1510-70) ಆಡಳಿತಕ್ಕೆ ಬಂದ.
- ಒಂದನೆ ಕೆಂಪೇಗೌಡ:
- ವಿಜಯನಗರದ ಚಕ್ರವರ್ತಿಗಳಾದ ಕೃಷ್ಣದೇವರಾಯ ಮತ್ತು ಅಚ್ಯುತರಾಯರ ಆಶ್ರಯ ಪಡೆದ ಈತ ಈಗಿನ ಬೆಂಗಳೂರು ಪ್ರದೇಶದಲ್ಲಿ ಅಚ್ಯುತರಾಯನ ಅನುಮತಿ ಪಡೆದು ಮಣ್ಣಿನ ಕೋಟೆಯನ್ನು ನಿರ್ಮಿಸಿ, ಅದನ್ನು ರಾಜಧಾನಿಯಾಗಿ ಮಾಡಿಕೊಂಡ.
- ಕೆಂಪೇಗೌಡ ಪಟ್ಟಣವನ್ನು ಬೆಳೆಸಿ ವ್ಯಾಪಾರ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿದ. ಗವಿಗಂಗಾಧರೇಶ್ವರ ಮತ್ತು ಬಸವನಗುಡಿಗಳನ್ನು ಕಟ್ಟಿಸಿ ಅರ್ಚಕರಿಗೆ ಅಗ್ರಹಾರಗಳನ್ನು ನಿರ್ಮಿಸಿದ. ಭೈರವ ನಾಣ್ಯಗಳ ಮುದ್ರಣಕ್ಕೆ ಒಂದು ಟಂಕಸಾಲೆಯನ್ನು ಸ್ಥಾಪಿಸಿದ.

# ರಾಜಧಾನಿಯ ಬದಲಾವಣೆ

- ಅನಂತರ ಗಿಡ್ಡೇಗೌಡ (1569-78) ತದನಂತರ ಇಮ್ಮಡಿ ಕೆಂಪೇಗೌಡ (1585--1633) ಅಧಿಕಾರಕ್ಕೆ ಬಂದರು.
- ಇಮ್ಮಡಿ ಕೆಂಪೇಗೌಡ
- ಸುದೀರ್ಘ ಕಾಲ ಆಳಿದ ಇಮ್ಮಡಿ ಕೆಂಪೇಗೌಡ ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ತನ್ನ ನಾಡನ್ನು ವಿಸ್ತರಿಸಿದ. ಹಲವಾರು ಹೊಸ ಗ್ರಾಮಗಳನ್ನು
- ನಿರ್ಮಿಸಿದ. ಸಾವನದುರ್ಗ ಮತ್ತು ಮಾಗಡಿ ಕೈತಪ್ಪಿಹೋಗಿದ್ದುದನ್ನು ಮತ್ತೆ ವಶಪಡಿಸಿಕೊಂಡ.
- ಬಿಜಾಪುರದ ಸೈನ್ಯದ ನಾಯಕ ರಣದುಲ್ಲಾಖಾನನಿಂದ 1638ರಲ್ಲಿ ಸೋಲುಂಡರೂ ಶಾಂತಿ ಒಪ್ಪಂದ ಮಾಡಿಕೊಂಡು, ಬೆಂಗಳೂರನ್ನು ಅವನಿಗೆ ಬಿಟ್ಟುಕೊಟ್ಟು ತನ್ನ ರಾಜಧಾನಿಯನ್ನು ಮಾಗಡಿಗೆ ಬದಲಾಯಿಸಿಕೊಂಡ.
- ಆ ಕಾರಣದಿಂದ ಈ ವಂಶದವರನ್ನು ಮಾಗಡಿ ಕೆಂಪೇಗೌಡರೆಂದು ಕರೆಯುವಂತಾಯಿತು.

# ಧರ್ಮಪ್ರಭು ಬಿರುದಾಂಕಿತ

- ಅನಂತರ ಹುಲಿಕಲ್ಲು, ಹುಲಿಯೂರುದುರ್ಗ, ಹುತ್ರಿದುರ್ಗ, ಭೈರವನದುರ್ಗ ಮತ್ತು ಕುಣಿಗಲ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದ್ದಲ್ಲದೆ ಶ್ರೀರಂಗಪಟ್ಟಣದ ಶ್ರೀರಂಗರಾಯನನ್ನು ಸೋಲಿಸಿದ.
- ತನ್ನ ಜನಹಿತ ಕಾರ್ಯಗಳಿಂದ ಧರ್ಮಪ್ರಭು ಎನಿಸಿಕೊಂಡ.

# ಕೊನೆಯ ಅರಸರು

- ಅವನ ಮರಣಾನಂತರ ಮಗ ಮುಮ್ಮಡಿ ಕೆಂಪೇಗೌಡ (1633-78). ಅವನ ಮಗ ದೊಡ್ಡವೀರಪ್ಪಗೌಡ (1678-1710) ಮತ್ತು ಅವನ ಮಗ ಮುಮ್ಮಡಿ ಕೆಂಪವೀರಪ್ಪಗೌಡ (1710-28) ಅಧಿಕಾರಕ್ಕೆ ಬಂದರು.
- ಅವನು ಮಾಗಡಿಯಲ್ಲದೆ ನೆಲಪಟ್ಟಣವೆಂಬ ಮತ್ತೊಂದು ದುರ್ಗವನ್ನು ನಿರ್ಮಿಸಿದ.
- 1728ರಲ್ಲಿ ಮೈಸೂರು ರಾಜ್ಯದ ದಳವಾಯಿ ದೇವರಾಜಯ್ಯ ಇವನನ್ನು ಸೋಲಿಸಿ ಸೆರೆಹಿಡಿದನಂತರ ಈ ಮನೆತನ ಕೊನೆಗೊಂಡು ಆ ಪ್ರದೇಶ ಮೈಸೂರು ರಾಜ್ಯಕ್ಕೆ ಸೇರಿತು.

# ಕೊಡುಗೆಗಳು:

- ಯಲಹಂಕದ ನಾಡಪ್ರಭುಗಳು ಹಲವಾರು ಪ್ರಜಾಹಿತ ಕಾರ್ಯಗಳನ್ನು ಮಾಡಿದ್ದರು.
- ನೀರಾವರಿಗೆ ಕೆರೆ ಕಾಲುವೆಗಳನ್ನು ನಿರ್ಮಿಸಿಕೊಟ್ಟಿದ್ದರು.
- ಕೆಂಪಾಂಬುಧಿ, ಅಲಸೂರು, ಬಿನ್ನಿಮಿಲ್ಲಿನ ಕೆರೆ ಮತ್ತು ಕಾರಂಜಿ ಕೆರೆ ಅವುಗಳಲ್ಲಿ ಪ್ರಮುಖವಾದವು.
- ಬೆಂಗಳೂರನ್ನು ಸ್ಥಾಪಿಸಿದ ಮೊದಲ ಕೆಂಪೇಗೌಡನು ನಗರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗೋಪುರಗಳನ್ನು ಕಟ್ಟಿಸಿ ಮುಂದೆ ಬೆಳೆಯಬಹುದಾದ ನಗರದ ಪರಿಮಿತಿಯನ್ನು ಸೂಚಿಸಿದ್ದ;

# ದೇವಾಲಯಗಳ ನಿರ್ಮಾಣ

- ಹಲವಾರು ದೇವಾಲಯಗಳನ್ನು ಹೊಸದಾಗಿ ಕಟ್ಟಿಸಿದುದಲ್ಲದೆ ಹಿಂದಿನ ದೇವಾಲಯಗಳನ್ನು ಇವರು ವಿಸ್ತರಿಸಿದರು.
- ಮಾಗಡಿಯ ರಂಗನಾಥದೇವಾಲಯ, ಸಾವನದುರ್ಗದ ವೀರಭದ್ರ ದೇವಾಲಯ, ಮಾಗಡಿಯ ಚೆಲುವರಾಯಸ್ವಾಮಿ ದೇವಾಲಯ, ಬೈಚಾಪುರದ ವರದ ಚೆಲುವರಾಯಸ್ವಾಮಿ ದೇವಾಲಯ, ಮಾಗಡಿಯ ಪಶ್ಚಿಮಕ್ಕಿರುವ ಸೋಮೇಶ್ವರ ದೇವಾಲಯ, ಶಿವಗಂಗೆಯ ಗಂಗಾಧರೇಶ್ವರ ದೇವಾಲಯ ಇವುಗಳಲ್ಲಿ ಮುಖ್ಯವಾದವು. ದೇವಾಲಯಗಳಿಗೆ ದಾನ ದತ್ತಿಗಳನ್ನು ನೀಡಿದ್ದರು.
- ಮುಮ್ಮಡಿ ಕೆಂಪೇಗೌಡ ಕಾಶಿಯಲ್ಲಿ ಒಂದು ಮಠ ಕಟ್ಟಿಸಿ ಅದಕ್ಕೆ ಒಂದು ಗ್ರಾಮವನ್ನು ದತ್ತಿಯಾಗಿ ಕೊಟ್ಟಿದ್ದ.
- ಮುಮ್ಮಡಿ ಕೆಂಪೇಗೌಡನ ಆಸ್ಥಾನ ಕವಿ ಮುಕ್ತೀಶ್ವರನ ಮಗ ಏಕಾಮ್ರ ದೀಕ್ಷಿತ ವೀರಭದ್ರ ವಿಜಯವೆಂಬ ಚಂಪೂಕಾವ್ಯ ರಚಿಸಿದ್ದಾನೆ.